ಕಥೆ

# ಕಿಬ್ಬದಿಯ ಕೀಲು ಮುರಿದಂತೆ



**ಬಿ. ಜನಾರ್ದನ ಭಟ್**

ಕಲೆ: ಮುರಳೀಧರ್ ರಾಥೋಡ್

ನಂದಕಿಶೋರನು ಯಾವಾಗಾದರೂ ಸಂಜೆ ಪೇಟೆಗೆ ಹೋಗಿ ದಿನಬಳಕೆಯ ಸಣ್ಣಪುಟ್ಟ ಸಾಮಾನು ತರಲಿಕ್ಕೆ ಇದ್ದರೆ ತನ್ನ ಹೊಂಡಾ ಆಕ್ಟಿವಾ ತೆಗೆದು ರೊಯ್ಯೆಂದು ಹೊರಟೇ ಬಿಡುವವನು! ಸ್ಕೂಟರ್ ಬಂದು ಮೊದಲು ನಿಲ್ಲುವುದು ದುರ್ಗಾದರ್ಶಿನಿ ಹೋಟೆಲಿನ ಎದುರು. ಅಲ್ಲಿ ಒಂದು 'ಊತಪ್ಪ' (ದೋಸೆ ಹೊಯ್ದು ಮೇಲೆ ನೀರುಳ್ಳಿ, ಮೆಣಸು, ಕೊತ್ತಂಬರಿ ಸೊಪ್ಪು ಇತ್ಯಾದಿಗಳನ್ನು ಹೆಚ್ಚಿ ಹರಡಿಸಿ ಕಾಯಿಸುವ ತಿಂಡಿ; 'ಉತ್ತಪ್ಪ' ಎಂಬ ನಾಮಾಂತರವಿದೆ) ಮತ್ತು ಕಾಫಿ ಕುಡಿದರೆ ಅದರ ಆನಂದವೇ ಬೇರೆ. ಹೆಂಡತಿ ಕೊಟ್ಟ ಚೀಟಿಯ ಪ್ರಕಾರ ಸಾಮಾನುಗಳಿಗಾಗಿ ಅಂಗಡಿ ಅಂಗಡಿ ಅಲೆಯುವುದು ಆಮೇಲೆ ಇದ್ದೇ ಇದೆ.

ಹೋಟೆಲ್ ಕಾಫಿಯಂಥ ಸಣ್ಣಪುಟ್ಟ ಸಾಹಸಗಳನ್ನೆಲ್ಲ ಹೆಂಡತಿ ಪಾವನಳ ಬಳಿ ಹೇಳಿ ಅವಳ ಮೂಡು ಕೆಡಿಸುವುದು ಅವನ ಜಾಯಮಾನವಲ್ಲ. ಒಂದು ವೇಳೆ ಹೇಳಿದರೆ, 'ನಾನು ಮಾಡುವ ತಿಂಡಿಯನ್ನು ನೀವು ಒಮ್ಮೆಯಾದರೂ ಇಷ್ಟಪಟ್ಟು ತಿಂದದ್ದುಂಟ?' ಇತ್ಯಾದಿ ಪ್ರಶ್ನೆಗಳಿಂದ ಸಂಸಾರದ ನೆಮ್ಮದಿಗೆ ಭಂಗವಾಗುವುದು ಗ್ಯಾರಂಟಿ. ಅಂದಮೇಲೆ ಅದನ್ನೆಲ್ಲ ಹೇಳುವ ಪ್ರಸಂಗವಿಲ್ಲ.

ಈ ದಿನ ನಂದಕಿಶೋರ ಹೋಟೆಲಿಗೆ ಬಂದು ತನಗೆ ಪ್ರಿಯವಾದ ಮೂಲೆಯ ಮರದ ಡಬ್ಬಲ್ ಕುರ್ಚಿಯಲ್ಲಿ ಕುಳಿತ ಕೂಡಲೆ ಸಪ್ಲಯರ್ ವಸಂತ ಅವನ ಬಳಿ ಬಂದು ಒಂದು ಲೋಟ ನೀರನ್ನು ಮೇಜಿನ ಮೇಲಿಟ್ಟು, 'ಉತ್ತಪ್ಪ ಕೊಡುವುದಾ?' ಎಂದು ಕೇಳಿದ. ನಂದಕಿಶೋರ, 'ಆದೀತು' ಎಂದು ಹೇಳಿದವನು, ಕಣ್ಣನ್ನು ಇತ್ತ ಹಾಯಿಸಿ ಕ್ಯಾಶ್ ಕೌಂಟರಿನ ಪಕ್ಕದ ತೆರೆದ ಕಪಾಟಿನಲ್ಲಿ ಪ್ರದರ್ಶನಕ್ಕಿಟ್ಟ ತಿಂಡಿಯ ತಾಟುಗಳನ್ನು ಕ್ಷಿಪ್ರವಾಗಿ ಅವಲೋಕಿಸಿದ. ಒಂದರಲ್ಲಿ ನಾಲ್ಕೈದು ಬಿಸ್ಕುಟಂಬಡೆ (ಉರುಟಾದ ಉದ್ದಿನವಡೆ), ಇನ್ನೊಂದರಲ್ಲಿ ಅರ್ಧದಷ್ಟು ಗೋಳಿಬಜೆ (ಮಂಗಳೂರು ಬಜ್ಜಿ) ಇದ್ದುದನ್ನು ಕಂಡು ಬಿಸ್ಕುಟಂಬಡೆ ಬೆಳಗಿನದೆಂದೂ, ಗೋಳಿಬಜೆ ಸಂಜೆಯದೆಂದೂ ಅನುಭವದಿಂದ ಗ್ರಹಿಸಿ, 'ಉತ್ತಪ್ಪ ತಯಾರಾಗುವವರೆಗೆ ಒಂದು ಪ್ಲೇಟು ಗೋಳಿಬಜೆ ಕೊಡು' ಎಂದ.

'ಒಂದು ಉತ್ತಪ್ಪಾ!' ಎಂದು ವಸಂತ ಒಳಗೆ ದೋಸೆ ಹೊಯ್ಯುವವನಿಗೆ ಕೂಗಿ ಹೇಳಿ, ಕಪಾಟಿನತ್ತ ಹೋಗಿ ಒಂದು ಪ್ಲೇಟಿಗೆ ಐದು ಗೋಳಿಬಜೆ ಮತ್ತು ಸ್ವಲ್ಪ ದ್ರವರೂಪದ ಚಟ್ನಿಯನ್ನು ಹಾಕಿ ನಂದಕಿಶೋರನ ಎದುರು ತಂದಿಟ್ಟ. ನಂದಕಿಶೋರ ಹದವಾಗಿ ಕೆಂಪಾದ ತಕ್ಕಷ್ಟು ಉರುಟಾದ ಒಂದು ಗೋಳಿಬಜೆಯನ್ನು ಆರಿಸಿ, ಚಟ್ನಿಯಲ್ಲಿ ಉರುಳಿಸಿ ಕಚ್ಚಿ ರುಚಿನೋಡುತ್ತಿದ್ದಂತೆ ಅವನ ಎದುರಿನ ಕುರ್ಚಿಯಲ್ಲಿ ಒಬ್ಬ ವ್ಯಕ್ತಿ ಬಂದು